KACM010010622021

Presented on : 04-05-2021
Registered on : 04-05-2021
Decided on : --
Duration :

**IN THE COURT OF**
**ADDL DISTRICT AND SESSIONS JUDGE CHIKMAGALUR**
**AT Chikmagalur,CHIKMAGALUR**
**(Presided Over by B PUSHPANJALI)**

**SC/87/2021**

**Exhibit No.**

Complainant(PROSECUTION):

State by Sakharayapatna Police, Rept. by The Public Prosecutor, Chikkamagaluru.

**VERSUS**

Accused:
Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM
Age: 33
Occupation :
R/o Machagondanahalli Village, S.K. Patna Hobli, Kadur Taluk, CKM

---------------------------------------------------------------------------

APP for State Complainant}: Public Prosecutor,
Advocate for I.S. THEJASVI appearing for Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM Advocate appearing for , respectively.

---------------------------------------------------------------------------

**Offence punishable under :**
**Sec.302, of INDIAN PENAL CODE,**

## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**ಸತ್ರ ಮೊಕದ್ದಮೆ ಸಂಖ್ಯೆಃ 87/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಹಾಲಮ್ಮ | **ಪಿ.ಡಬ್ಲ್ಯೂ** | 02 |
| **ಗಂಡನ ಹೆಸರು** | ಲೇಟ್ ತಿಮ್ಮಯ್ಯ | **ಸಿ.ಡಬ್ಲ್ಯೂ** | 06 |
| **ವಯಸ್ಸು** | 66 ವರ್ಷ | | |
| **ಉದ್ಯೋಗ** | ವ್ಯವಸಾಯ | | |
| **ವಾಸಸ್ಥಳ** | ಮಾಚಗೊಂಡನಹಳ್ಳಿ, ಕಡೂರು ತಾಃ | | |

**ಆರೋಪಿಯನ್ನು ಚಿಕ್ಕಮಗಳೂರು ಜಿಲ್ಲಾ ಕಾರಾಗೃಹದಿಂದ ವಿ.ಸಿ. ಮೂಲಕ ಹಾಜರು ಪಡಿಸಿರುತ್ತಾರೆ**

**ದಿಃ 06-08-2022 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. **ಈಗ ನ್ಯಾಯಾಲಯದ ಮುಂದೆ ವಿ.ಸಿ. ಮೂಲಕ ಕಾಣುತ್ತಿರುವ ಆರೋಪಿ ನನ್ನ ಮಗ. ಮೃತ ತಮ್ಮಯ್ಯ ನನ್ನ ಗಂಡ. ಚಾಸಾ.1 ನನ್ನ ಮಗಳು. ಚಾಸಾ.7 ನನ್ನ ತಮ್ಮ. ಚಾಸಾ.9 ನನ್ನ ಗಂಡನ ತಂಗಿ ಮಗ. ಚಾಸಾ.10 ನನ್ನ ಮೈದುನ. ಉಳಿಕೆ ಸಾಕ್ಷಿದಾರರು ನನಗೆ ಗೊತ್ತಿಲ್ಲ.**

2. **ದಿಃ 11-01-2021 ರಂದು ನನ್ನ ಮೈದುನ ಚಾಸಾ.10 ಹಾಗೂ ನನ್ನ ಗಂಡನ ನಡುವೆ ಆಸ್ತಿ ವಿಚಾರವಾಗಿ ಜಗಳವಾಯಿತು. ಆ ದಿನ ನನ್ನ ಗಂಡ ಮದ್ಯಪಾನ ಮಾಡಿದ್ದು, ನಾನು ಮತ್ತು ಚಾಸಾ.1 ಜಗಳ ಮಾಡಿಕೊಳ್ಳಬೇಡಿ ಮನೆಯಲ್ಲೇ ಇರಿ ಎಂದು ಹೇಳಿದರು ಸಹ ನಮ್ಮ ಮಾತನ್ನು ಕೇಳದೇ ನನ್ನ**

ಗಂಡ ತೋಟದ ಕಡೆ ಹೋಗುತ್ತೇನೆ ಎಂದು ಹೇಳಿ ಓಡಿ ಹೋಗುತ್ತಿದ್ದರ. ಆಗ ನನ್ನ ಗಂಡ ಓಡಿ ಹೋಗುವುದನ್ನು ನಾನು ಹಾಗೂ ಚಾಸಾ.1 ರವರು ನೋಡಿ ಹಿಂದೆಯೇ ನನಗೆ ಓಡಲು ಆಗದಿದ್ದರಿಂದ ಚಾಸಾ.1 ರವರು ಹೋದರು ಸಹ ನನ್ನ ಗಂಡ ಓಡಿ ಹೋಗುವಾಗ ಮುಂದೆ ಇದ್ದ ಕಲ್ಲಿಗೆ ಎಡವಿ ಬಿದ್ದಾಗ ಅವರ ತಲೆಗೆ ಏಟಾಯಿತು. ನಂತರ ನನ್ನ ಗಂಡ ಮೃತಪಟ್ಟಿರುತ್ತಾರೆ.

3. ಈಗ ನೋಡುತ್ತಿರುವ 6 ಫೋಟೋಗಳಲ್ಲಿ ನನ್ನ ಗಂಡನ ಶವ ಕಂಡು ಬರುತ್ತದೆ. ಸಾಕ್ಷಿ ಗುರುತಿಸಿದ ಸದರಿ ಫೋಟೋಗಳನ್ನು ನಿಪಿ.5 ರಿಂದ ಪಿ.10 ಎಂದು ಗುರುತಿಸಲಾಯಿತು. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

4. ನಮಗೆ ಚಾಸಾ.1 ಮತ್ತು ಆರೋಪಿ ಇಬ್ಬರೇ ಮಕ್ಕಳು ಎಂದರೆ ಸರಿ. ಆರೋಪಿಗೆ ಇನ್ನೂ ಮದುವೆಯಾಗಿಲ್ಲ ಎಂದರೆ ಸರಿ. ಚಾಸಾ.1 ರವರ ಗಂಡ ಮೃತಪಟ್ಟ ನಂತರ ಆಕೆ ತವರು ಮನೆಯಲ್ಲೇ ವಾಸವಾಗಿದ್ದಳು ಎಂದರೆ ಸರಿ.

5. ಆರೋಪಿಯು ಮನೆ ಮತ್ತು ಜಮೀನಿನ ಯಾವುದೇ ಕೆಲಸ ಮಾಡದೇ ತಿರುಗಾಡುತ್ತಿದ್ದರಿಂದ ಮೃತ ನನ್ನ ಗಂಡ ಆತನಿಗೆ ಬುದ್ದಿ ಹೇಳಿದರು ಆತ

ಕೇಳದಿದ್ದಾಗ ಇಬ್ಬರ ನಡುವೆ ಜಗಳವಾಗುತ್ತಿತ್ತು ಎಂದರೆ ಸರಿಯಲ್ಲ. ಆರೋಪಿಯು ಈ ಘಟನೆಗೂ ಒಂದು ವರ್ಷದ ಹಿಂದೆ ಹೆಚ್.ಡಿ.ಎಫ್.ಸಿ. ಫೈನಾನ್ಸ್ ನಲ್ಲಿ ಸಾಲ ಪಡೆದು ಒಂದು ಟ್ರ್ಯಾಕ್ಟರ್ ನ್ನು ಮೃತ ನನ್ನ ಗಂಡನ ಹೆಸರಿನಲ್ಲಿ ಖರೀದಿ ಮಾಡಿದ್ದನು ಎಂದರೆ ಸರಿಯಲ್ಲ. ಸದರಿ ಬ್ಯಾಂಕಿಗೆ ಒಂದು ವರ್ಷದಿಂದ ಆರೋಪಿ ಸಾಲದ ಕಂತು ಕಟ್ಟಿರಲಿಲ್ಲ ಎಂದರೆ ಸರಿಯಲ್ಲ.

6. ದಿಃ 11-01-2021 ರಂದು ಬೆಳಗ್ಗೆ ನನ್ನ ಗಂಡ ಜಮೀನು ಕೆಲಸಕ್ಕೆ ಹೋಗಿದ್ದು, ಮಧ್ಯಾಹ್ನ 3 ಗಂಟೆಗೆ ವಾಪಸ್ ಮನೆಗೆ ಬಂದು ಮನೆಯಲ್ಲಿದ್ದ ಆರೋಪಿಗೆ ಬ್ಯಾಂಕಿನವರು ಬಂದು ಕಂತು ಕಟ್ಟಿಲ್ಲ ಎಂದು ನನ್ನ ಮರ್ಯಾದೆ ತೆಗೆದು ಹೋಗಿರುತ್ತಾರೆ, ನೀನು ದಂಡಪಿಂಡನಾಗಿದ್ದು ಮನೆಯಲ್ಲಿ ಬಿಟ್ಟಿ ಬಿದ್ದಿದ್ದು, ದುಡಿದು ಟ್ರ್ಯಾಕ್ಟರ್ ನ ಕಂತನ್ನು ಕಟ್ಟಲು ಆಗುವುದಿಲ್ಲವೇ ಎಂದು ಬೈದರು ಎಂದರೆ ಸರಿಯಲ್ಲ. ಆಗ ಆರೋಪಿ ಮತ್ತು ನನ್ನ ಗಂಡನಿಗೆ ಮಾತಿಗೆ ಮಾತು ಬೆಳೆದು ಬೈದಾಡಿಕೊಂಡರು ಎಂದರೆ ಸರಿಯಲ್ಲ. ಆಗ ಆರೋಪಿಯು ನನ್ನ ಗಂಡನಿಗೆ ಹೊಡೆಯಲು ಹೋಗಿದ್ದು, ಅಲ್ಲೇ ಇದ್ದ ನಾನು, ನನ್ನ ಮಗಳು ಮತ್ತು ನನ್ನ ಮೈದುನ ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ನಂತರ ಮಧ್ಯಾಹ್ನ 3.30 ಗಂಟೆಗೆ ನನ್ನ ಗಂಡ ತೋಟಕ್ಕೆ ಹೋಗುವುದಾಗಿ ಮನೆಯಿಂದ ಹೊರಟಿದ್ದು, ಅವರ ಹಿಂದೆಯೇ ಆರೋಪಿ ಈ ದಿವಸ ನಿನಗೆ ಒಂದು ಗತಿ ಕಾಣಿಸುತ್ತೇನೆ ಎಂದು ಹೇಳಿಕೊಂಡು ಅವರ ಹಿಂದೆ ಹೋದನು ಎಂದರೆ ಸರಿಯಲ್ಲ. ನಾನು ಇವರದ್ದು ಪ್ರತಿದಿನ ಜಗಳ ಇದುದ್ದರಿಂದ ಮನೆ ಕೆಲಸ ಮಾಡಲೆಂದು

ಮನೆಯೊಳಗೆ ಹೋದೆನು ಎಂದರೆ ಸರಿಯಲ್ಲ.

7. ನಂತರ ಸ್ವಲ್ಪ ಸಮಯಕ್ಕೆ ಸಂಜೆ 4 ಗಂಟೆಗೆ ನಮ್ಮ ಊರಿನವರಾದ ಯಾರೋ ಒಬ್ಬರು ಬಂದು ಆರೋಪಿಯು ಶಾಲೆಯ ಹಿಂಭಾಗದ ಓಣಿಯಲ್ಲಿ ಕಲ್ಲಿನಿಂದ ನನ್ನ ಗಂಡನ ತಲೆಗೆ ಹೊಡೆದು ಸಾಯಿಸಿರುತ್ತಾನೆ ಎಂದು ತಿಳಿಸಿದ್ದು, ಕೂಡಲೇ ಚಾಸಾ.1 ಅಲ್ಲಿಗೆ ಹೋದಳು ಎಂದರೆ ಸರಿಯಲ್ಲ. ನಂತರ ನಾನು ಮಕ್ಕಳನ್ನು ಪಕ್ಕದ ಮನೆಯಲ್ಲಿ ಬಿಟ್ಟು ಹೋಗಿ ನೋಡಿದಾಗ, ನನ್ನ ಗಂಡ ರಕ್ತದ ಮಡುವಿನಲ್ಲಿ ಮಕಾಡೆಯಾಗಿ ಬಿದ್ದು ಸತ್ತು ಹೋಗಿದ್ದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಚಾಸಾ.1, ನಮ್ಮ ಸಂಬಂಧಿ ಕಾರ್ತಿಕ್ ಹಾಗೂ ಗಂಗಾಧರಪ್ಪ ರವರುಗಳು ನಿಂತಿದ್ದರು ಎಂದರೆ ಸರಿಯಲ್ಲ. ಕಾರ್ತಿಕರನ್ನು ನಾನು ವಿಚಾರ ಮಾಡಲಾಗಿ, ಆರೋಪಿಯು ನನ್ನ ಗಂಡನನ್ನು ಅಟ್ಟಿಸಿಕೊಂಡು ಹೋಗಿ ಕಲ್ಲಿನಿಂದ ತಲೆಗೆ ಜಜ್ಜಿ ಕೊಲೆ ಮಾಡಿರುತ್ತಾನೆ ಎಂದು ತಿಳಿಸಿದನು ಈ ಬಗ್ಗೆ ನಾನು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.11 ಎಂದು ಗುರುತಿಸಲಾಯಿತು. ನನ್ನ ಮಗ ಜೈಲಿನಲ್ಲಿರುವುದರಿಂದ ಮಗನ ವ್ಯಾಮೋಹದಿಂದ ಆತ ಜೈಲಿನಿಂದ ಹೊರಗೆ ಬರಲೆಂದು ಚಾಸಾ.1 ರವರ ಮಾತನ್ನು ಕೇಳಿ ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ</u>

8. ಮೃತ ನನ್ನ ಗಂಡ ಚಾಸಾ.10 ರವರೊಂದಿಗೆ ಜಗಳ ಮಾಡಿಕೊಂಡು ಮನೆಯಲ್ಲಿ ಕೂಗಾಡುತ್ತಿದ್ದ ಸಮಯದಲ್ಲಿ ನಾನು ಮತ್ತು ನನ್ನ ಮಗಳು

ಚಾಸಾ.1 ರವರನ್ನು ಬಿಟ್ಟರೆ ಮನೆಯಲ್ಲಿ ಬೇರೆ ಯಾರು ಇರಲಿಲ್ಲ. ನನ್ನ ಗಂಡ ಬಿದ್ದ ನಂತರ 1-2 ನಿಮಿಷಕ್ಕೆ ನಾನು ಸ್ಥಳಕ್ಕೆ ಹೋದೆ ಎಂದರೆ ಸರಿ. ನಾನು ಹೋಗಿ ನೋಡಿದಾಗ ಚಾಸಾ.1 ರವರನ್ನು ಬಿಟ್ಟರೆ ಸ್ಥಳದಲ್ಲಿ ಬೇರೆ ಯಾರು ಇರಲಿಲ್ಲ. ನಂತರ ಚಾಸಾ.7 ರವರಿಗೆ ಫೋನ್ ಮಾಡಿ ತಿಳಿಸಿ ಕರೆಸಿಕೊಂಡೆನು. ಚಾಸಾ.7 ರವರು ನಮ್ಮ ಪಕ್ಕದ ಹಳ್ಳಿಯ ವಾಸಿಯಾಗಿದ್ದರಿಂದ, ಆತ 10 ನಿಮಿಷಕ್ಕೆ ಸ್ಥಳಕ್ಕೆ ಬಂದನು ಎಂದರೆ ಸರಿ. ನಂತರ ಚಾಸಾ.7 ರವರು ಬಂದ ತಕ್ಷಣ ಮೃತ ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು ಮತ್ತು ಅಲ್ಲಿಯ ತನಕ ಬೇರೆ ಯಾರು ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿ. ಆಸ್ಪತ್ರೆಗೆ ನನ್ನ ಗಂಡನನ್ನು ದಾಖಲು ಮಾಡಿ ವಿಷಯ ತಿಳಿದ ಮೇಲೆ ಆರೋಪಿ ಆಸ್ಪತ್ರೆಗೆ ಬಂದಿದ್ದ ಎಂದರೆ ಸರಿ. ಆ ಸಮಯದಲ್ಲಿ ಪೊಲೀಸರು ಆಸ್ಪತ್ರೆಗೆ ಬಂದಿದ್ದರು ಎಂದರೆ ಸರಿ. ಪೊಲೀಸರಿಗೆ ಮಾಹಿತಿಯನ್ನು ಚಾಸಾ.9 ಮತ್ತು 10 ರವರು ನೀಡಿದ್ದರು ಎಂದರೆ ಸರಿ. ಆಸ್ತಿ ವಿಚಾರವಾಗಿ ಮೃತ ನನ್ನ ಗಂಡ ಹಾಗೂ ಚಾಸಾ.9 ಮತ್ತು 10 ರವರ ನಡುವೆ ವೈಮನಸ್ಸು ಇತ್ತು ಎಂದರೆ ಸರಿ. ಆರೋಪಿ ಆಸ್ಪತ್ರೆಗೆ ಬಂದಾಗ ಆತನನ್ನು ಪೊಲೀಸರು ತಮ್ಮ ಜೊತೆ ಕರೆದುಕೊಂಡು ಹೋದರು ಎಂದರೆ ಸರಿ. ಈಗಲೂ ಸಹ ಒಟ್ಟು ಕುಟುಂಬದ ಆಸ್ತಿಯನ್ನು ಚಾಸಾ.10 ರವರು ಕೊಟ್ಟಿಲ್ಲ ಎಂದರೆ ಸರಿ.

9. ನಮ್ಮ ಕುಟುಂಬದಲ್ಲಿ ಆರೋಪಿಗೆ ಸ್ವಲ್ಪ ತಿಳುವಳಿಕೆ ಇರುವುದು ಬಿಟ್ಟರೆ, ನನಗೆ ಮತ್ತು ನನ್ನ ಮಗಳಿಗೆ ಅಷ್ಟು ತಿಳುವಳಿಕೆ ಇಲ್ಲ ಎಂದರೆ ಸರಿ. ಈಗಲೂ ಸಹ ಒಟ್ಟು ಕುಟುಂಬದ ಆಸ್ತಿಯ ಉತ್ಪತ್ತಿಯನ್ನು ಚಾಸಾ.10

ರವರೇ ತಿನ್ನುತ್ತಿದ್ದಾರೆ ಎಂದರೆ ಸರಿ. ಚಾಸಾ.4 ಹಾಗೂ ಚಾಸಾ.10 ರವರು ಒಳ್ಳೆಯ ಸ್ನೇಹಿತರು ಎಂದರೆ ಸರಿ. ಚಾಸಾ.4 ರವರ ಮನೆ ಊರಿನಿಂದ ದೂರದಲ್ಲಿರುವ ತೋಟದಲ್ಲಿ ಮನೆ ಇದೆ ಎಂದರೆ ಸರಿ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ
ಸಹಿ/-

(ಬಿ.ಪುಷ್ಪಾಂಜಲಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ರೂ.

Visit **ecourts.gov.in** for updates or download mobile app "**eCourts Services**" from Android or iOS